ಅಧ್ಯಕ್ಷರು. - ತಾವು ಉದ್ವೇಗಗೊಳ್ಳಬೇಡಿ. ನಾನು ತಮಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಿಮಗೆ ಅಂತಹ ಬೆದರಿಕೆ ಬಂದಾಗ ತಾವು ತಕ್ಷಣ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಗದ ಬರೆಯಬೇಕಾಗಿತ್ತು. ತಾವು ಪದೇ ಪದೇ ಈ ಸದನದಲ್ಲಿ ವೀರಪ್ಪನ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದುದ್ದುಂಟು. ತಾವು ತಮಗೆ ಬೆದರಿಕೆ ಪತ್ರ ಬಂದಂ ಬಂದು ತಿಂಗಳಾದರೂ ಏತಕ್ಕೆ ಸುಮ್ಮನೆ ಇದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ತಾವು ತಕ್ಷಣ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯಬೇಕಾಗಿತ್ತು, ಅಥವಾ ನನಗೆ ಕಾಗದ ಬರೆಯಬೇಕಾಗಿತ್ತು. because I am concerned about the safety of every hon. member of this House.

ಶ್ರೀ ವಾಟಾಳ್ ನಾಗರಾಜ್.—ನಾನು ಮೈಸೂರು ಜಿಲ್ಲೆಯ ಎಸ್.ಪಿ.ಯವರಿಗೆ ಮತ್ತು ಮೈಸೂರು ಜಿಲ್ಲೆಯ ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ತಕ್ಷಣ ಹೇಳಿದ್ದೇನೆ.

ಅಧ್ಯಕ್ಷರು.—ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ಸದಸ್ಯರೊಬ್ಬರು ಸದನದ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವಂತಹ ಕಾಲದಲ್ಲಿ ಸಾರ್ವಜನಿಕವಾದ ವಿಚಾರಗಳನ್ನು ಇಲ್ಲಿ ಅವರು ಎತ್ತುತ್ತಾರೆ. ಅದರ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಬೆದರಿಕೆಗಳು ಬಂದಾಗ ಬೇಷಿಕ್ ಕರ್ಟಸಿಗಾದರೂ ಸಭಾಧ್ಯಕ್ಷರಿಗೆ ಕಾಗದ ಬರೆಯಬೇಕಾಗಿತ್ತು. ತಾವೆಲ್ಲರೂ ಸೇರಿ ನಿಮ್ಮ ಹಕ್ಕುಭಾದ್ಯತೆಗಳನ್ನು ಕಾಪಾಡುವ ಹೊಣೆ ಹಾಗೂ ಕರ್ತವ್ಯವನ್ನು ನನಗೆ ಮಾಡಿ ಕೊಟ್ಟಿದ್ದೀರಿ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರಿಂದ ನಾನು ಅಪೇಕ್ಷೆ ಮಾಡುತ್ತೇನೆ. ಏನೆಂದರೆ, ಇವತ್ತು ಕಾಲ ಇನ್ನೂ ಮೀರಿಲ್ಲ, ನನಗೆ ಕಾಗದ ಬರೆದರೆ ನಾನು ತಮ್ಮ ರಕ್ಷಣೆಗೆ ಬರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.-ಕಾಂಗ್ರೆಸ್ಸ್ ಪಕ್ಷದ ಸದಸ್ಯರು ಬೇಜವಾಬ್ದಾರಿಯಿಂದ ನಗುತ್ತಿದ್ದಾರೆ. ಅವರ ವರ್ತನೆ ಸರಿ ಇಲ್ಲ. ಇದು ಹೊಣೆಗೇಡಿ ವರ್ತನೆ, ಇದು ಸರಿಯಲ್ಲ. ಇದು ಅವಿವೇಕಿಗಳ ವರ್ತನೆ.

ಕಾವೇರಿ ಮೂರನೆ ಹಂತದ ಯೋಜನೆ

೬. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರಕ್ಕೆ ಪ್ರತಿ ದಿನ ಎಷ್ಟು ಗ್ಯಾಲನ್ ಕುಡಿಯುವ ನೀರು ಬೇಕಾಗಿದೆ, ಹಾಗೂ ಹಾಲಿ ಸರಬರಾಜಾಗುತ್ತಿರುವ ನೀರಿನ ಪ್ರಮಾಣವೆಷ್ಟು ?

ಆ) ಬೆಂಗಳೂರು ನಗರಕ್ಕೆ ಮೂನೇ ಹಂತದ ಕಾವೇರಿ ಯೋಜನೆ ಯಾವಾಗ ಪ್ರಾರಂಭವಾಯಿತು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು ?

ಇ) ಕಾವೇರಿ ಮೂನೇ ಹಂತದ ಯೋಜನೆಗೆ ಬೇಕಾಗಿರುವ ಮೊತ್ತವೆಷ್ಟು ಹಾಗೂ ಹಾಲಿ ೩೧-೫-೧೯೯೦ ರವರೆಗೆ ವೆಚ್ಚ ಮಾಡಿರುವ ಮೊಬಲಗೆಷ್ಟು ?

ಈ) ಈ ಯೋಜನೆ ಪೂರ್ಣ ಗೊಂಡಲಿ ಬೆಂಗಳೂರು ನಾಗರೀಕರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವುದೇ ? ಇಲ್ಲದಿದ್ದಲ್ಲಿ ಪುನಃ ಹೊಸ ಯೋಜನೆ ರೂಪಿಸುವ ಅಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಬೆಂಗಳೂರು ನಗರಕ್ಕೆ ದಿನಕ್ಕೆ ೧೧೦ ದಶಲಕ್ಷ ಲೀಟರ್ (೨೪೩-೦೦ ಎಂಜಿಡಿ)ನಷ್ಟು ಕುಡಿಯುವ ನೀರಿನ ಅವಶ್ಯಕತೆ ಇದ್ದು, ಸಧ್ಯಕ್ಕೆ ೪೩೦ ದಶಲಕ್ಷ ಲೀಟರ್ (೯೫ ಎಂಜಿಡಿ) ನಷ್ಟು ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಕಾವೇರಿ ನೀರು ಸರಬರಾಜು ಯೋಜನೆ ಮೂನೇ ಹಂತವು ೧೯೮೫-೮೬ನೇ ಸಾಲಿನಲ್ಲಿ ಪ್ರಾರಂಭ ಗೊಂಡಿದ್ದು, ೧೯೯೧ನೇ ಸಾಲಿನ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಕಾವೇರಿ ನೀರು ಸರಬರಾ ು ಯೋಜನೆ ಮೂನೇ ಹಂತಕ್ಕೆ ೨೪೦-೦೦ ಕೋಟಿ ರೂ.ಗಳ ಅಂದಾಜು ವೆಚ್ಚವನ್ನು ತಯಾರಿಸಿದ್ದು, ೧೯೯೦ನೇ ಸಾಲಿನ ಏಪ್ರಿಲ್ ಮಾಹೆಯ ಅಂತ್ಯದವರೆಗೂ ೧೦೯.೮೮ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) ನಗರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುವುದಿಲ್ಲ ಈ ಸಮಸ್ಯೆಯನ್ನು ನಿವಾರಿಸಲು ೧೦೦೦–೦೦ ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ ನೀರು ಸರಬರಾಜು ಯೋಜನೆ ಳಿನೇ ಹಂತವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ , ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಲಿಖಿತ ಮೂಲಕ ಉತ್ತರಗಳನ್ನು ಒದಗಿಸಲಾಗಿದೆ. ಅವರು ಆ ಬಗ್ಗೆ ಉಪ ಪ್ರಶ್ನೆಗಳು ಏನಾದರೂ ಇದ್ದರೆ ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ ನನಗೆ ಲಿಖಿತ ಉತ್ತರ ಬಂದಿಲ್ಲ.

ಶ್ರೀ ಟಿ.ಎನ್, ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ನಾವು ತಮ್ಮ ಕಛೇರಿಗೆ ಸರ್ಕಾರದ ಉತ್ತರವನ್ನು ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸದಸರು ಇನ್ನು ಹೆಚ್ಚಿನ ಮಾಹಿತಿ ಏನಾದರೂ ಕೇಳಬಯಸುವುದಾದರೆ ಪ್ರತ್ಯೇಕವಾಗಿ ನನ್ನ ಬಳಿ ಬಂದು ಮಾತನಾಡಿದರೆ ನಾನು ಅವರ ಪ್ರಶ್ನೆಗಳಿಗೆ ಉತ್ತರ ಹೇಳುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಈಗ ನನಗೆ ಲಿಖಿತ ಉತ್ತರ ಸಿಕ್ಕಿದೆ ಸ್ವಾಮಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಕೇಳಿದ ಮೇಲೆ ಅದು ಸದನದ ಸ್ವತ್ತಾಗುತ್ತದೆ. ಆದರೂ ಸದಸ್ಯರು ಪ್ರತ್ಯೇಕವಾಗಿ ಬಂದು ಕೇಳಿದರೆ ಉತ್ತರ ಹೇಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರೆ ಆದನ್ನು ಹಾಗೆಯೇ ಬಿಡಬಹುದೇ?

ಶ್ರೀ ಎಂ. ರಾಮಪ್ಪ.—ಹಿಂದೆ ಇದ್ದ ಸರ್ಕಾರದಲ್ಲಿ ಮಾನ್ಯ ಸಿಂಧ್ಯಾರವರು ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ಆಮೇಲೆ ಬನ್ನಿ , ಅದರ ಬಗ್ಗೆ ಮಾತನಾಡೋಣವೆಂದು ಹೇಳುತ್ತಿದ್ದರು.

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ನಾನು ಯಾವತ್ತೂ ಆ ತರಹ ಹೇಳಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಆಗ ಅದನ್ನು ನೀವು ಏಕೆ ಕೇಳಲಿಲ್ಲ ? ಸದನದ ನಿಯಮ ತಮಗೆ ಗೊತ್ತಿಲ್ಲದೆ ಇದ್ದರೆ ಅದಕ್ಕೆ ನಾವು ಕಾರಣರಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಹೆಸರು ಹೇಳಿರುವುದರಿಂದ ಒಂದು ಸ್ಪಷ್ಟನೆಯನ್ನು ನಾನು ಕೊಡಬೇಕಾದರೆ, ಮಾನ್ಯ ಸದಸ್ಯರುಗಳಿಗೆ ಹೆಚ್ಚಿನ ಮಾಹಿತಿ ಬೇಕಾಗಿದ್ದ ಸಂದರ್ಭದಲ್ಲಿ, ನನ್ನ ಕಛೇರಿಯಿಂದ ಅದನ್ನು ಒದಗಿಸಿಕೊಡುತ್ತೇನೆಂದು ಹೇಳಿದ್ದೇನೆಯೇ ಹೊರತು ಹೊರಗಡೆ ಬನ್ನಿ ವ್ಯವಹಾರ ಮಾಡುತ್ತೇನೆಂದು ಹೇಳಿರಲಿಲ್ಲ.

ಅಧ್ಯಕ್ಷರು.—ಮಾನ್ಯ ನರಸಿಂಹಮೂರ್ತಿಯವರೂ ಅಷ್ಟನ್ನೇ ಹೇಳಿದ್ದು.

ಶ್ರೀ ಕೆ. ಲಕ್ಕಣ್ಣ.—ಕಾವೇರಿ ನದಿ ನೀರು ಸರಬರಾಜು ಯೋಜನೆಯು ಇನೇ ಹಂತಕ್ಕೆ ೨೪೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಾಡಿ ಇದುವರೆಗೆ ೧೦೪.೧೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇನ್ನೂ ೧೩೫.೮೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇನ್ನು ೬ ತಿಂಗಳಲ್ಲಿ ಕೆಲಸ ಮಾಡಿ ಮುಗಿಸುತ್ತೇವೆಂದು ಹೇಳಿದ್ದಾರೆ. ಇನ್ನು ೬ ತಿಂಗಳಲ್ಲಿ ಇಷ್ಟು ಹಣವನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಬರುವ ಮಾರ್ಚ್ ತಿಂಗಳ ಅಂತ್ಯದೊಳಗೆ ವಿವಿಧ ಇಲಾಖೆಗಳಿಂದ ಬರಬೇಕಾದ ಹಣವನ್ನು ಕ್ರೋಢೀಕರಿಸಿ ಅದನ್ನು ತೀವ್ರಗತಿಯಿಂದ ಅದ್ಯತೆ ಮೇರೆಗೆ ಈ ಯೋಜನೆಯನ್ನು ಪೂರ್ಣಗೊಳಿಸತಕ್ಕ ವಿಶ್ವಾಸ ಸರ್ಕಾರಕ್ಕಿದೆ.

ಶ್ರೀ ಕೆ. ಲಕ್ಕಣ್ಣ.—ಈ ಯೋಜನೆಗೆ ವರ್ಷಕ್ಕೆ ೮ ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದೀರಿ. ಇನ್ನುಳಿದಿರುವ ಕಡಿಮೆ ಅವಧಿಯಲ್ಲಿ ೧೩೫.೮೨ ಕೋಟಿ ರೂಪಾಯಿಗಳನ್ನು ಹೇಗೆ ಕೊಡುವುದಕ್ಕೆ ಸಾಧ್ಯವೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಟಿ. ಎನ್ ನರಸಿಂಹಮೂರ್ತಿ.—ಅದು ಸರ್ಕಾರದ ಜವಾಬ್ದಾರಿ. ಹಣವನ್ನು ಅದ್ಯತೆ ಮೇರೆಗೆ ತೀವ್ರಗತಿಯಿಂದ ಒದಗಿಸಿ ಈ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರಕ್ಕೆ ಕಳಕಳಿ ಇದೆಯೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇನೆ.

ಅಧ್ಯಕ್ಷರು.—ರಮಾನಾಥ ರೈ ಅವರು.